‘ಹಲವಾರು ಬಾರಿ ನಾವು ತ್ರಾಸದಾಯಕವಾಗಿರುವ ಇಲ್ಲವೇ ಪ್ರಾಣವನ್ನು ಒತ್ತೆ ಇಟ್ಟು ಮಾಡುವಂತಹ ಕೆಲಸಗಳಿಗೆ ವಿಶೇಷ ಸವಲತ್ತುಗಳನ್ನು ಒದಗಿಸುತ್ತೇವೆ. ಇದಕ್ಕೂ ಅಂತಹ ಸವಲತ್ತುಗಳನ್ನು ನೀಡುವ ಯೋಜನೆ ಇದ್ದರೆ ಚಂದ್ರನೆಡೆಗೆ ಹೋಗಲು ಅಧಿಕಾರಿ ಹಾಗೂ ಸಿಬ್ಬಂದಿಗಳು ಮುಂದೆ ಬರಬಹುದು’ ಎಂದೊಬ್ಬರು ಸಲಹೆ ನೀಡಿದರು. ಅದಕ್ಕೆ ಕೂಡಲೇ ಸಭಿಕರಿಂದ ‘ಹೌದು’ ಎಂಬ ಸಹಮತ ಸಿಕ್ಕಿತ್ತು. ಅವರಲ್ಲೊಬ್ಬ ನಡುವೆ ಚಟಾಕಿ ಹಾರಿಸಿದ್ದ.

‘ಅರೆಮಾನವ ಪಡೆಯನ್ನೇ ಈ ನೂತನ ಯೋಜನೆಗೆ ಅಳವಡಿಸಿಕೊಂಡರೆ ಹೇಗೆ? ಅವರಿಗೆ ಜೀವನೋಪಾಯಕ್ಕೂ ದಾರಿ ಮಾಡಿಕೊಟ್ಟಂತೆ ಆಗುತ್ತದೆ.’

ಸವ್ಯಸಾಚಿ ಆ ಮಾತನ್ನು ಗಂಭೀರವಾಗಿಯೇ ಪರಿಗಣಿಸಿದ್ದರು.

‘ಹೊಸ ವಾತಾವರಣದಲ್ಲಿ ವಾಸ್ತವ್ಯ ಹೂಡಲು ಪರೀಕ್ಷೆಗಳಿಗೆ ಒಳಪಟ್ಟ ಹಲವಾರು ಜನರನ್ನು ಆಯ್ಕೆ ಮಾಡಿ ಚಂದ್ರನಲ್ಲಿಗೆ ಕಳುಹಿಸಲಾಗುತ್ತದೆ. ಅರೆಮಾನವಪಡೆಯ ದೈಹಿಕ ಸಾಮರ್ಥ್ಯವು ರೊಬೋಟ್‌ಗಳಿಗಿಂತಲೂ ಯಾವ ರೀತಿ ಉತ್ತಮವೆಂದು ಇನ್ನೂ ಸಾಬೀತಾಗದ ಕಾರಣ ಅವರನ್ನು ಚಂದ್ರನಲ್ಲಿಗೆ ಕಳುಹಿಸುವ ರಿಸ್ಕ್ ತೆಗೆದುಕೊಳ್ಳುವವರಾರು?’

‘ಸರ್, ಈ ಭೂಮಿಗೆ ಭಾರವಾದವರನ್ನು ಚಂದ್ರನಲ್ಲಿಗೆ ಸಾಗಾಣಿಕೆ ಮಾಡಿದರೆ ಹೇಗೆ?’

‘ಅಂದರೆ... ಈ ಹಿಂದೆ ಅಂಡಮಾನ್ ನಿಕೋಬಾರ್ ದ್ವೀಪಗಳಿಗೆ ಕೈದಿಗಳನ್ನು ಕಳುಹಿಸಿದಂತೆ ಎಂದು ಹೇಳುವಿರಾ?’

...

‘ನೋ ಮ್ಯಾನ್ಸ್ ಲ್ಯಾಂಡ್ ಆದ ಚಂದ್ರನನ್ನು ನಾವು ಒಂದು ಪ್ರವಾಸಿ ತಾಣವನ್ನಾಗಿ ಹಾಗೂ ಸಂಶೋಧನಾ ಕೇಂದ್ರವನ್ನಾಗಿ ಮಾಡಲು ಹೊರಟಿರುವಾಗ ಇದ್ಯಾವ ಆಶಯ ನಿಮ್ಮದು’ ಎಂದಾಗ, ಸಲಹೆ ನೀಡಿದಾತ ತನ್ನ ಮಾತು ತನಗೇ ಉರುಳಾದಂತೆ ಮೌನ ವಹಿಸಿದ.

‘ಇಲ್ಲಿಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ನಮ್ಮ ಸಭೆಯ ಕಾರ್ಯಸೂಚಿಗಳನ್ನು ಮುಂಚಿತವಾಗಿಯೇ ನೀಡಿರುವುದರಿಂದ, ನಿಮ್ಮಲ್ಲಿ ಸರಿಯಾದ ಉತ್ತರವನ್ನೇ ನಿರೀಕ್ಷಿಸಲಾಗುತ್ತದೆ’.

‘ಸರ್, ನಮಗೆ ನಮ್ಮ ಕ್ಷೇತ್ರದ ವಿಷಯಕ್ಕೆ ಸಂಬಂಧಿಸಿದಂತೆ ಆದ ಬೆಳವಣಿಗೆಗಳು ಹಾಗೂ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬೇಕೆಂದು ತಿಳಿಸಲಾಗಿರುತ್ತದೆ’ ಎಂದು ಸಭಿಕರಲ್ಲೊಬ್ಬರು ನುಡಿದರು.

‘ಅದು ಸಭೆಯ ಅಜೆಂಡಾದಲ್ಲಿ ಒಂದು ವಿಷಯವಾಗಿದೆ. ಆ ಕುರಿತಾಗಿ ಪ್ರತಿಯೊಂದು ಉಪಕ್ಷೇತ್ರದವರೂ ವಿಷಯ ಮಂಡಿಸಬೇಕಾಗುತ್ತದೆ. ಅದಕ್ಕೂ ಮುಂಚೆ ನಾವು ನಮ್ಮ ಸಂಚಾರ ವ್ಯವಸ್ಥೆಯ ದೃಶ್ಯಾವಳಿಗಳನ್ನು ರಿಯಲ್ ಟೈಮ್‌ನಲ್ಲಿ ಜಿಪಿಎಸ್ ಮೂಲಕ ವೀಕ್ಷಿಸಿ ನಂತರ ನಿಮ್ಮ ಕಾರ್ಯಕ್ಷೇತ್ರದ ಮುಖ್ಯಾಂಶಗಳ ಮೇಲೆ ಬೆಳಕು ಚೆಲ್ಲೋಣ’ ಎಂದು ಅವರು ಹೇಳುತ್ತಿದ್ದಂತೆಯೇ ಅವರಿದ್ದ ವೇದಿಕೆಯ ಹಿನ್ನೆಲೆಯು ರಸ್ತೆಯ ಮೇಲಿನ ದೃಶ್ಯಗಳನ್ನು ಪ್ರಸ್ತುತಪಡಿಸತೊಡಗಿತ್ತು.

ಜನಸಂದಣಿ ಸ್ಥಳಗಳ ಪರಿವೀಕ್ಷಣೆಯ ಬಳಿಕ ಡಿಜಿಟಲ್ ಸೂಚಕಗಳ ಒಟ್ಟಾರೆ ಕಾರ್ಯ ನಿರ್ವಹಣೆ, ಸಾರ್ವಜನಿಕರ ದೂರು ನಿರ್ವಹಣೆ, ಪ್ರಕರಣಗಳ ವಿಲೇವಾರಿ ಕುರಿತಾಗಿ ಚರ್ಚೆ ನಡೆಸಲಾಗಿತ್ತು. ಅಂಕಿಅಂಶಗಳ ತುಲನೆಯಾದ ಬಳಿಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಭೆ ನಡೆದ ಅವಧಿಯಲ್ಲಿ ಹೊರಗೆ ಹಲವಾರು ಘಟನೆಗಳೇ ಜರುಗಿಹೋಗಿದ್ದವು. ಪ್ರತಿಯೊಬ್ಬರ ಎಂ.ಪಿ. ವಾಕಿಗೆ ಹಲವಾರು ಸಂದೇಶಗಳು ರವಾನೆಯಾಗಿ ಎಲ್ಲರೂ ಅವರವರ ಕಾರ್ಯಕ್ಷೇತ್ರದ ಆಗುಹೋಗುಗಳ ಕಡೆ ಗಮನ ಹರಿಸಲು ಕೂಡಲೇ ತೆರಳಿದ್ದರು.

ಹನ್ನಾ ಅವಿರತ್‌ನಿಗೆ ವಿದಾಯ ಹೇಳಿ ತಾನೂ ಹೊರಟಿದ್ದಳು. ಅವಳು ನೇರವಾಗಿ ಸಾಗಿದ್ದು ಹೆದ್ದಾರಿಯೊಂದರ ಬದಿಯ ಆಸ್ಪತ್ರೆಯ ಕಡೆಗೆ.

ಅವಳ ಎಂ.ಪಿ. ವಾಕಿಯ ಆಪ್ತ ಸಹಾಯಕಿ ತಂತ್ರಾಂಶ ಅವಳಿಗೆ ಹಲವಾರು ಬಾರಿ ನೆನಪಿಸುವ ಕೆಲಸವನ್ನು ಮಾಡಿತ್ತು. ಒಂದು ಚಿಕ್ಕ ಆಕೃತಿಯು 3ಡಿ ಮಾದರಿಯಲ್ಲಿ ಎಂ.ಪಿ. ವಾಕಿಯ ಪರದೆಯ ಮೇಲೆ ಕಾಣಿಸಿ, ಅವಳು ಆ ದಿನ ನಿರ್ವಹಿಸಬೇಕಾದ ಕೆಲಸಗಳನ್ನು ತಿಳಿಸಿ ಹೇಳುತ್ತಿತ್ತು. ತುರ್ತು ಸಂದರ್ಭಗಳಲ್ಲಿ ಅವಳ ದಿನಚರಿಯಲ್ಲಿ ಬದಲಾವಣೆ ಮಾಡಿ ಪ್ರಮುಖ ವಿಷಯಗಳಿಗೆ ಮೊದಲು ಆದ್ಯತೆ ನೀಡಲಾಗುತ್ತಿತ್ತು. ಅಂದು ಆಗಿದ್ದುದೂ ಅದೇ. ಹನ್ನಾ ತನ್ನ ಆಪ್ತ ಸಹಾಯಕಿ ‘ಶಮ್ಮಿ’ಯ ಉವಾಚದಂತೆ ಹೆದ್ದಾರಿಯ ಆಸ್ಪತ್ರೆಯೆಡೆ ಹೊರಟಾಗ ಅಲ್ಲಿಗೆ ಪ್ರಕರಣವೊಂದು ಜರುಗಿದೊಡನೆಯೇ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು.

ಆಸ್ಪತ್ರೆಯ ಸ್ವಾಗತಕಾರಣಿಯ ಸೂಚನೆಯಂತೆ ಸಾರ್ವಜನಿಕ ಸಂಪರ್ಕ ಅಧಿಕಾರಿಯನ್ನು ಉದ್ದೇಶಿಸಿ ಕೇಳಿದಳು, ‘ಆವರಣದಲ್ಲಿ ನಿಂತಿರುವವರು ಗಾಯಾಳುವಿನ ಸಂಬಂಧಿಕರೇ?’

‘ಹೌದು ಮೇಡಂ.’

‘ಗಾಯಾಳು ಹೇಗಿದ್ದಾನೆ?’

‘ಆತನನ್ನು ತುರ್ತು ಘಟಕಕ್ಕೆ ಶಿಫ್ಟ್ ಮಾಡಲಾಗಿದೆ. ಅವರ ಸಂಬಂಧಿಕರು ಕಾತುರದಿಂದ ಹೊರಗೆ ಕಾಯುತ್ತಿದ್ದಾರೆ.’

‘ವೆಯಿಟಿಂಗ್ ರೂಮ್‌ನಲ್ಲಿ ಅವರೆಲ್ಲಾ ಕುಳಿತುಕೊಳ್ಳಬಹುದಾಗಿತ್ತು. ಈ ರೀತಿ ಹೊರಗೆ ನಿಂತುಕೊಂಡಿರುವುದರ ಔಚಿತ್ಯವೇನು?’

‘ಅವರೀಗ ಕಾತುರದಿಂದ ಒಂದು ಅಂಗಕ್ಕಾಗಿ ಕಾಯುತ್ತಿದ್ದಾರೆ.’

‘ಅದೇನದು?’

‘ಗಾಯಾಳುವಿನ ಸೊಂಟಕ್ಕೆ ಬಲವಾದ ಪೆಟ್ಟಾದ ಪರಿಣಾಮವಾಗಿ ಆತನ ಪಿತ್ತಜನಕಾಂಗಕ್ಕೂ ಅಪಾರ ಏಟು ಬಿದ್ದಿದೆ. ಅದರ ಬದಲಿ ವ್ಯವಸ್ಥೆಯಾಗಬೇಕಿರುತ್ತದೆ. ಈಗಷ್ಟೇ ಮರಣ ಹೊಂದಿದ ಒಬ್ಬ ದಾನಿಯಿಂದ ಪಿತ್ತಜನಕಾಂಗವೊಂದನ್ನು ಇಲ್ಲಿಗೆ ರವಾನಿಸಿ ಅಳವಡಿಸುವ ವ್ಯವಸ್ಥೆಯಾಗಿತ್ತು. ಆದರೆ ನಡುವೆ ಸಂಚಾರದ ತೀವ್ರತೆಯಿಂದ ಅದರ ರವಾನೆಯಲ್ಲಿ ಅಡಚಣೆ ಉಂಟಾಗಿದೆ.’

‘ನೀವು ಮುಂಚಿತವಾಗಿ ನಮಗೆ ಈ ಮಾಹಿತಿ ರವಾನೆ ಮಾಡಿದ್ದಲ್ಲಿ ನಾವೊಬ್ಬರು ನೋಡಲ್ ಅಧಿಕಾರಿಯನ್ನು ನೇಮಿಸಿ ಗ್ರೀನ್ ಕಾರಿಡಾರ್ ವ್ಯವಸ್ಥೆ ಮಾಡುತ್ತಿದ್ದೆವು. ಹೋಗಲಿ, ನಿಮ್ಮ ಆಂಬ್ಯುಲೆನ್ಸ್ ಈಗ ಎಲ್ಲಿದೆ?’

‘ಹೊರವಲಯದಲ್ಲಿರುವ ರಾಜ್ಯದ ಗಡಿ ಪ್ರದೇಶದ ಹೆದ್ದಾರಿಯಲ್ಲಿ ಸಿಲುಕಿಕೊಂಡಿದೆ.’

‘ಇಂದು ಸಾರ್ವತ್ರಿಕ ರಜಾದಿನವಾದ್ದರಿಂದ ನಗರದಿಂದ ಹೊರಗಿನ ಪ್ರವಾಸಿ ತಾಣಕ್ಕೆ ಭೇಟಿ ನೀಡಿದ ಜನ ವಾಪಸ್ಸು ಅತ್ತಲಿಂದ ಬರುತ್ತಿರುವುದರಿಂದ ಈ ಸಮಸ್ಯೆ ಎದುರಾಗಿದೆ. ಬೆಳಗ್ಗೆ ಹೊರಹರಿವು ಹೆಚ್ಚಾಗಿದ್ದರೆ ಸಂಜೆಯಾಗುತ್ತಿದ್ದಂತೆ ಒಳಹರಿವು ಜಾಸ್ತಿಯಾಗುತ್ತದೆ. ನಿಮ್ಮ ವಾಹನದ ಜಿ.ಪಿ.ಎಸ್. ಲೊಕೇಷನ್ ತಿಳಿಸಿ. ಏನಾದರೂ ವ್ಯವಸ್ಥೆ ಮಾಡಲಾಗುವುದೇ ನೋಡ್ತೀನಿ.’

ಸಾರ್ವಜನಿಕ ಸಂಪರ್ಕ ಅಧಿಕಾರಿ ಕೂಡಲೇ ಆಂಬ್ಯುಲೆನ್ಸ್ ಹಾಲಿ ಇದ್ದ ಸ್ಥಳವನ್ನು ಆಸ್ಪತ್ರೆಯ ಕಂಪ್ಯೂಟರ್‌ನಲ್ಲಿ ವೀಕ್ಷಿಸಿ ವಿಷಯ ತಿಳಿಸಿದ್ದ.

ಹನ್ನಾ ತನ್ನ ಎಂ.ಪಿ. ವಾಕಿಯ ಪರದೆಯ ಮೇಲೆ ಸಂಚಾರ ದಟ್ಟನೆಯನ್ನು ವೀಕ್ಷಿಸಿದಳು. ಆಂಬ್ಯುಲೆನ್ಸ್ ಇದ್ದ ಪ್ರದೇಶದಲ್ಲಿ ಅಪಾರ ದಟ್ಟನೆಯಿರುವುದನ್ನು ಕೆಂಪು ವರ್ಣದಲ್ಲಿ ತೋರಿಸಿತ್ತು. ವಾಹನ ದಟ್ಟನೆಯನ್ನು ತೆರವುಗೊಳಿಸುವುದು ಅಷ್ಟು ಸುಲಭ ಸಾಧ್ಯವೂ ಆಗಿರಲಿಲ್ಲ. ಆ ಪ್ರದೇಶದಲ್ಲಿದ್ದ ಮತ್ತೊಬ್ಬ ಟ್ರಾಫಿಕ್ ವಾರ್ಡನ್‌ಗೆ ಸಂಪರ್ಕ ಸಾಧಿಸುವುದೊಂದೇ ಹೊರಕಿಂಡಿಯಾಗಿತ್ತು.

‘ಬ್ರಿಜ್. ನಿಮಗೆ ಈ ಒಂದು ಆಂಬ್ಯುಲೆನ್ಸ್‌ನ ಮಾಹಿತಿ ರವಾನಿಸುತ್ತಿದ್ದೇನೆ. ನೀವು ಹೇಗಾದರೂ ಮಾಡಿ ದಾನಿಯ ಪಿತ್ತಜನಕಾಂಗ ತುರ್ತಾಗಿ ಈ ಆಸ್ಪತ್ರೆಗೆ ತಲುಪುವಂತೆ ಮಾಡಿ. ನಿಯಂತ್ರಣ ಕೇಂದ್ರಕ್ಕೆ ಪರಿಸ್ಥಿತಿಯ ವಿವರ ನೀಡುತ್ತಿರಿ’ ಎಂದಾಗ, ಅತ್ತ ಕಡೆಯಿಂದ ಸಹಚರ ಟ್ರಾಫಿಕ್ ವಾರ್ಡನ್ ಬ್ರಿಜ್‌ನ ಮುಖ ಪರದೆಯ ಮೇಲೆ ಮೂಡಿದ್ದು ಅವಳ ಮಾತಿಗೆ ಸಕಾರಾತ್ಮಕವಾಗಿಯೇ ಪ್ರತಿಕ್ರಿಯೆ ನೀಡಿದ್ದ.

‘ಹನ್ನಾ. ನಿಮ್ಮ ಮಾತು ನನಗರ್ಥವಾಯಿತು. ಇಲ್ಲಿರುವ ವಾಹನ ದಟ್ಟಣೆ ನೋಡುತ್ತಿದ್ದರೆ ಇದೆಲ್ಲಾ ಸಹಜವಾಗಿಯೇ ತೆರವಾಗಬೇಕಿದೆ. ಸಂಜೆಯ ವೇಳೆ ತಮ್ಮ ವಾಸಸ್ಥಳಗಳಿಗೆ ಬೇಗನೇ ತೆರಳುವ ಅವಸರದಲ್ಲಿರುವವರು. ಆದರೆ ಸಮಯ ತೆಗೆದುಕೊಳ್ಳುತ್ತದೆ.’

‘ಆದರೆ ಇಲ್ಲಿಗೆ ಬೇಗನೇ ಆ ಪಿತ್ತಜನಕಾಂಗ ತಲುಪಬೇಕಿದೆ ಎಂದು ಆಸ್ಪತ್ರೆಯವರು ತಿಳಿಸ್ತಾ ಇದ್ದಾರೆ. ಗಾಯಾಳು ಕ್ರಿಟಿಕಲ್ ಕಂಡೀಷನ್‌ನಲ್ಲಿದ್ದಾರೆ.’

‘ನಾನು ಇಲ್ಲಿನ ಪರಿಸ್ಥಿತಿ ಹೇಳಿದೆನಷ್ಟೇ. ಕೆಲ ಸಮಯ ಕಾಯಬಹುದೇ ಅಂತಾ ಆಸ್ಪತ್ರೆಯವರನ್ನು ಕೇಳಿ ನೋಡಿ’ ಬ್ರಿಜ್ ಅತ್ತಲಿಂದ ಸಲಹೆ ನೀಡಿದ.